ಇಂದು ದಿಃ **04-06-2026 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದ ಸಾಕ್ಷಿಯನ್ನು ಪುನಃ ಕರೆಯಿ**ಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ ಎನ್ ಜೆ ವಕೀಲರಿಂದ ಪ್ರತಿವಾದಿಯ ಪರಃ**

ಈ ದಾವೆಯನ್ನು ನಾನು ನನ್ನ ತಾಯಿ , ಅಕ್ಕ ಮತ್ತು ಅಣ್ಣನ ವಿರುದ್ಧ ದಾಖಲು ಮಾಡಿರುತ್ತೇನೆ. ನನ್ನ ತಂದೆ ದಿಃ 21-12-2023 ರಂದು ತೀರಿಕೊಂಡಿರುತ್ತಾರೆ. ನನಗೆ ದಾವಾ ಆಸ್ತಿಗಳ ಬಗ್ಗೆ ಮಾಹಿತಿ ಇದೆ. ದಾವಾ ಆಸ್ತಿಗಳು ಮೂಲತಃ ನನ್ನ ತಂದೆಗೆ ಸೇರಿದ ಆಸ್ತಿಗಳು ಇರುತ್ತವೆ. ಐಟಂ ನ. 1 ರ ವಿಸ್ತೀರ್ಣ 1 ಎಕರೆ 39 ಗುಂಟೆ ಇರುತ್ತದೆ. ಇನ್ನೊಂದು ಜಮೀನು 1 ಎಕರೆ 31 ಗುಂಟ ಇರುತ್ತದೆ. ಈ ಜಮೀನುಗಳು ನನ್ನ ತಂದೆ ನನ್ನ ದೊಡ್ಡಪ್ಪನಿಂದ ಖರೀದಿ ಮಾಡಿದ್ದರು. ನನ್ನ ದೊಡ್ಡಪ್ಪ ಹೆಸರು ಮಂಜಪ್ಪ ಎಂದು ಇರುತ್ತದೆ. ಯಾವ ವರ್ಷದಲ್ಲಿ ನನ್ನ ತಂದೆ ಖರೀದಿ ಮಾಡಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ.

ಸರ್ವೇ ನಂ. 12/8 ನ್ನು ನನ್ನ ತಂದೆ ಸ್ವಂತ ದುಡಿದು ಖರೀದಿ ಮಾಡಿದ್ದರು. ಯಾವ ವರ್ಷದಲ್ಲಿ ಖರೀದಿ ಮಾಡಿದ್ದರು ಎಂದು ಗೊತ್ತಿಲ್ಲ. ಐಟಂ ನಂ. 2 ಮತ್ತು 3 ಆಸ್ತಿಗಳನ್ನು 3 ನೇ ಪ್ರತಿವಾದಿ ತನ್ನ ಸ್ವಂತ ದುಡಿಮೆಯಿಂದ ಖರೀದಿ ಮಾಡಿದ್ದ ಎಂದರೆ ಸರಿಯಲ್ಲ , ಸಾಕ್ಷಿ ನನ್ನ ತಂದೆ ದನದ ಮತ್ತು ಹಾಲಿನ ವ್ಯಾಪಾರ ಮಾಡುತ್ತಿದ್ದರು ಅದರಿಂದ ಖರೀದಿ ಮಾಡಿದ್ದಾರೆಂದು ಹೇಳುತ್ತಾರೆ. 3 ನೇ ಪ್ರತಿವಾದಿ ಕೂಲಿ ಕೆಲಸ ಮಾಡುತ್ತಾ ಈ ಜಮೀನುಗಳನ್ನು ಖರೀದಿ ಹಿಡಿದನು ಎಂದರೆ ಸರಿಯಲ್ಲ.
ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿದ್ದು , ನೀಡಲಾಯಿತು.

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.
Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ, ಸಂಚಾರಿ ನ್ಯಾಯಾಲಯ,

ಹೊನ್ನಾಳಿ.